# ನೆಹರು: ಪರ ಮತ್ತು ವಿರೋಧ

ಭಾರತದ ರಾಜಕೀಯ ವಾದವಿವಾದಗಳಲ್ಲಿ ನೀವು ಯಾವ ಭಿನ್ನಮತದ ಅಂಚಿನಲ್ಲಿ ನಿಂತಿದ್ದೀರೋ ಅದನ್ನು ಆಧರಿಸಿ, ಹಿಂದೆಂದೂ, ಜವಾಹರಲಾಲ್ ನೆಹರು – ಮತ್ತು ಅವರ ಆಲೋಚನೆಗಳನ್ನು –ಇಷ್ಟೊಂದು ತೀವ್ರವಾಗಿ ಟೀಕೆಗೆ ಗುರಿಯಾಗಿರಿಸಿರಲಿಲ್ಲ, ಅಥವಾ ಇಷ್ಟೊಂದು ಹೊಗಳಿಕೆಗೆ ಒಳಪಡಿಸಿರಲೂ ಇಲ್ಲ; ಅವರ 128ನೇ ಜನ್ಮದಿನದ ಸಂದರ್ಭದಲ್ಲಿ, ದಿ ಇಂಡಿಯನ್ ಎಕ್ಸ್‌ಪ್ರೆಸ್ ನೆಹರು ಎಂಬ ವ್ಯಕ್ತಿ ಹಾಗೂ ಅವರ ಪರಂಪರೆಯನ್ನು ಕುರಿತ ಚರ್ಚೆಯನ್ನು ಹಿಡಿದಿಡುತ್ತದೆ.

ಇಂದು ನೆಹರು ವಿರೋಧಿ ವಾದವನ್ನು ಮುನ್ನಡೆಸುತ್ತಿರುವ ಅನೇಕ ರಾಜಕಾರಣಿಗಳು ಭಾರತದ ಸ್ವಾತಂತ್ರ್ಯದ ಪ್ರಾರಂಭಿಕ ವರ್ಷಗಳಲ್ಲಿ ನೆಹರು ಅವರು ದೇಶವನ್ನು ಮುನ್ನಡೆಸುತ್ತಿದ್ದ ಸಮಯದಲ್ಲಿ ಒಂದೋ ಹುಟ್ಟಿರಲಿಲ್ಲ ಅಥವಾ ಬಾಲ್ಯಾವಸ್ಥೆಯಲ್ಲಿದ್ದರು. ಇವರ ಹಲವು ಪೂರ್ವವರ್ತಿಗಳು (predecessors) – ಉದಾಹರಣೆಗೆ 1950ರ ದಶಕದಲ್ಲಿ ನೆಹರು ಅವರೊಂದಿಗೆ ಲೋಕಸಭೆಯ ಸಭಾಂಗಣವನ್ನು ಹಂಚಿಕೊಂಡ ಅಟಲ್ ಬಿಹಾರಿ ವಾಜಪೇಯಿ ಅವರು ನೆಹರೂ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು ಎಂಬುದು ತಿಳಿದಿರುವ ವಿಷಯವೇ. (ಚಿತ್ರಣ: ಸುಬ್ರತ ಧರ್)

- 2014ರಲ್ಲಿ ಎನ್.ಡಿ.ಎ. ಸರ್ಕಾರವು ಅಧಿಕಾರಕ್ಕೆ ಬಂದ ಕೆಲವೇ ತಿಂಗಳೊಳಗೆ, ಜವಾಹರಲಾಲ್ ನೆಹರು ಅವರ ಆರ್ಥಿಕ ಪರಂಪರೆಯ ಅತ್ಯಂತ ಪ್ರತ್ಯಕ್ಷ ಪ್ರತೀಕವೆನಿಸಿದ್ದ ಯೋಜನಾ ಆಯೋಗವನ್ನು ರದ್ದುಪಡಿಸುತ್ತದೆ

- ಸಂಸ್ಕೃತಿ ಸಚಿವಾಲಯವು ನೆಹರು ಅವರ ಅಧಿಕೃತ ನಿವಾಸವಾದ ತೀನ್ ಮೂರ್ತಿ ಭವನದಲ್ಲಿರುವ ನೆಹರು ಸ್ಮಾರಕ ಸಂಗ್ರಹಾಲಯ ಮತ್ತು ಗ್ರಂಥಾಲಯವನ್ನು, ಎಲ್ಲಾ ಭಾರತೀಯ ಪ್ರಧಾನಮಂತ್ರಿಗಳ ಜೀವನವನ್ನು ಪ್ರದರ್ಶಿಸುವ ಸಂಕೀರ್ಣವನ್ನಾಗಿ ಪರಿವರ್ತಿಸುವ ನಿರ್ಧಾರವನ್ನು ಕೈಗೊಳ್ಳುತ್ತದೆ.

- ನೆಹರು ಯುವ ಕೇಂದ್ರಗಳಿಂದ ನೆಹರು ಅವರ ಹೆಸರನ್ನು ಕೈಬಿಡುವ ಪ್ರಸ್ತಾವನೆಯನ್ನು ಯುವ ವ್ಯವಹಾರಗಳ ಇಲಾಖೆ ಮಂಡಿಸುತ್ತದೆ.

- ಬೆಂಗಳೂರಿನಲ್ಲಿ ನಡೆದ ಭಾಷಣವೊಂದರಲ್ಲಿ ಬಿ.ಜೆ.ಪಿ. ಅಧ್ಯಕ್ಷರಾದ ಅಮಿತ್ ಷಾ, ನೆಹರು ಅವರು "ಪಾಶ್ಚಾತ್ಯ ಆಲೋಚನೆಗಳನ್ನು ಎರವಲು ತೆಗೆದುಕೊಂಡು, ಅಸ್ತಿತ್ವದಲ್ಲಿದ್ದ ಸಂಸ್ಕೃತಿ ಮತ್ತು ವ್ಯವಸ್ಥೆಗಳನ್ನು ನಾಶಮಾಡುವ ಮೂಲಕ ಭಾರತವನ್ನು ಮರುಶೋಧಿಸಲು ಪ್ರಯತ್ನಿಸಿದರು" ಎಂದು ಹೇಳುತ್ತಾರೆ.

- ಭಾರತದ ರಾಷ್ಟ್ರೀಯ ಆರ್ಕೈವ್ಸ್‌ನ ಒಂದು ಪ್ರದರ್ಶನದಲ್ಲಿ 'ಭಾರತ ತ್ಯಜಿಸಿ' ಚಳವಳಿಯ ಪ್ರಮುಖ ನಾಯಕರುಗಳ ಪೈಕಿ ನೆಹರು ಅವರನ್ನು ಸೇರಿಸದೇ ಬಿಡಲಾಗುತ್ತದೆ.

ಇದು ಒಬ್ಬ ವ್ಯಕ್ತಿ ಮತ್ತು ಅವರ ರಾಜಕೀಯ ವಿರೋಧಿಗಳ ನಡುವಿನ ವಿಚಾರವೇ? ಅಥವಾ ಇದು ದೇಶದ ಮೊದಲ ಪ್ರಧಾನಮಂತ್ರಿ ಕಂಡಂತಹ ಭಾರತ ಎಂಬ ಕಲ್ಪನೆ ಮತ್ತು ಇಂದಿನ ಆಡಳಿತ ವ್ಯವಸ್ಥೆ ಕಂಡುಕೊಂಡಂತೆ 'ಹೊಸ ಭಾರತ' ಎಂಬ ದೃಷ್ಟಿಕೋನಗಳ ನಡುವಿನ ಪೈಪೋಟಿಯೇ? 70 ವರ್ಷಗಳ ಹಿಂದೆ ಮಧ್ಯರಾತ್ರಿಯೊಂದರಲ್ಲಿ ಇಡೀ ದೇಶಕ್ಕೆ 'ಭವಿಷ್ಯದ ಜೊತೆಗಿನ ಸಮಾಗಮ'ದ ಕುರಿತು ನೆನಪಿಸಿದ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ಈ ಹೊಸ ಭಾರತದಲ್ಲಿ ಯಾವ ಜಾಗವಿದೆ? ಎನ್.ಡಿ.ಎ. ಸರ್ಕಾರವಾಗಲಿ ಅಥವಾ ಬಿ.ಜೆ.ಪಿ./ಆರ್.ಎಸ್.ಎಸ್.ನೊಳಗಿನ ವ್ಯಕ್ತಿಗತ ಧ್ವನಿಗಳಾಗಲಿ, ಭಾರತದ ಮೊದಲ ಪ್ರಧಾನಮಂತ್ರಿಯಿಂದ ಬೇರ್ಪಟ್ಟ ಭಾರತದ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲಿ, ಸ್ವಾತಂತ್ರ್ಯ ಹೋರಾಟದ ಮೂವರು ಮಹಾನ್ ನಾಯಕತ್ರಯರಲ್ಲಿ ಒಬ್ಬರಾದ ನೆಹರು, ಮೊತ್ತ ಮೊದಲ ಬಾರಿಗೆ ಪ್ರಶ್ನೆಗೊಳಗಾಗಿದ್ದಾರೆ.

ಕಾಂಗ್ರೆಸ್ ಪಕ್ಷವು ಸಾರ್ವಕಾಲಿಕ ದುರ್ಬಲ ಸ್ಥಿತಿಯಲ್ಲಿದ್ದು, ಬಿ.ಜೆ.ಪಿ ಪುನರುಜ್ಜೀವಿತಗೊಂಡಿರುವ ಈ ಸಮಯದಲ್ಲಿ, ನೆಹರು ಅವರ ಪ್ರಸ್ತುತತೆಯ ಕುರಿತ ತಮ್ಮ ನಿರ್ಧಾರಣೆಯನ್ನು, ಎ.ಬಿ.ವಿ.ಪಿ.ಯ ಮಾಜಿ ಕಾರ್ಯದರ್ಶಿ ಹಾಗೂ ಪ್ರಸ್ತುತ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಅಧ್ಯಕ್ಷರಾಗಿರುವ ರಾಮ್ ಬಹಾದುರ್ ರೈ ಪ್ರಬಲವಾಗಿ ಹೀಗೆ ಮಂಡಿಸುತ್ತಾರೆ: "2014ನೇ ವರ್ಷವು ನೆಹರು ಅವರ ರಾಜಕೀಯ ಅಂತ್ಯವನ್ನು ಸೂಚಿಸಿತು. ದೇಶದ ಭವಿಷ್ಯವನ್ನು ಏನೆಂದು ಆರ್.ಎಸ್.ಎಸ್. ಕಲ್ಪಿಸಿಕೊಂಡಿದೆಯೋ, ಅದರಲ್ಲಿ ನೆಹರು ಅವರಿಗೆ ಯಾವುದೇ ಸ್ಥಾನವಿಲ್ಲ."

ಇಂದು ನೆಹರು ವಿರೋಧಿ ವಾದವನ್ನು ಮುನ್ನಡೆಸುತ್ತಿರುವ ಅನೇಕ ರಾಜಕಾರಣಿಗಳು ನೆಹರು ಅವರು ಭಾರತದ ಸ್ವಾತಂತ್ರ್ಯದ ಪ್ರಾರಂಭಿಕ ವರ್ಷಗಳಲ್ಲಿ ದೇಶವನ್ನು ಮುನ್ನಡೆಸುತ್ತಿದ್ದ ಸಮಯದಲ್ಲಿ ಒಂದೋ ಹುಟ್ಟಿರಲಿಲ್ಲ ಅಥವಾ ಬಾಲ್ಯಾವಸ್ಥೆಯಲ್ಲಿದ್ದರು. ಆದರೆ ಅವರ ಹಿಂದಿನವರು — ಉದಾಹರಣೆಗೆ 1950ರ ದಶಕದಲ್ಲಿ ನೆಹರು ಅವರೊಂದಿಗೆ ಲೋಕಸಭೆಯ ಸಭಾಂಗಣವನ್ನು ಹಂಚಿಕೊಂಡ ಅಟಲ್ ಬಿಹಾರಿ ವಾಜಪೇಯಿ ಅವರು — ನೆಹರೂ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು ಎಂಬುದು ತಿಳಿದಿರುವ ವಿಷಯವೇ. ಹಾಗಿದ್ದರೆ, ಈಗಿನ ಸಂದರ್ಭದಲ್ಲಿ ನೆಹರು ಅವರ 'ರಾಜಕೀಯ ಮರಣ'ಕ್ಕೆ ಕಾರಣವೇನು?

## ಭಾರತೀಯ ಸಂಸ್ಕೃತಿಯನ್ನು ಕುರಿತ ಪ್ರೀತಿಯಿಲ್ಲ

ಭಾರತೀಯ ರಾಜಕಾರಣದ ಬಲಪಂಥವು — ಬ್ರಿಟಿಷರಿಂದ ಸ್ವಾತಂತ್ರ್ಯಕ್ಕಾಗಿ ಕಠಿಣ ಹೋರಾಟ ನಡೆಸಿದ ನಮ್ಮ ದೇಶಕ್ಕೆ ನೆಹರು ಅವರು ಕೊಂಚ ಹೆಚ್ಚೇ ಸುಸಂಸ್ಕೃತವಾದ, ಸ್ವಲ್ಪ ಹೆಚ್ಚೇ ಯುರೋಪಿಯನ್ ಮನೋಭಾವ ಹೊಂದಿದ ವ್ಯಕ್ತಿ ಎಂದೇ ಸದಾ ಭಾವಿಸಿದೆ."ಸ್ವಾತಂತ್ರ್ಯದ ನಂತರ, ಯುರೋಪಿಯನ್ ರಾಜಕೀಯ ಸಂಸ್ಕೃತಿ ಮತ್ತು ಸಾಮಾಜಿಕ ತತ್ತ್ವಚಿಂತನೆಯ ರೂಪದಲ್ಲಿ ವಸಾಹತುಶಾಹಿ ಆಡಳಿತವನ್ನು ಶಾಶ್ವತಗೊಳಿಸಲು ನೆಹರು ಪ್ರಮುಖವಾಗಿ ಜವಾಬ್ದಾರರಾಗಿದ್ದರು. ಅವರು ತಾವು ಭಾರತವನ್ನು ಯುರೋಪಿನ ದೃಷ್ಟಿಕೋನದ ಮೂಲಕವೇ ಅರಿತಿದ್ದೇನೆಂದು ಸ್ವತಃ ಒಪ್ಪಿಕೊಂಡಿದ್ದರು," ಎಂದು ಆರ್.ಎಸ್.ಎಸ್.ನ ಸಿದ್ಧಾಂತವಾದಿ ರಾಕೇಶ್ ಸಿನ್ಹಾ ಹೇಳುತ್ತಾರೆ.

ಸಿನ್ಹಾ ಹೇಳುವಂತೆ, ನೆಹರು ಅವರು ತಮ್ಮ ಯುರೋಪಿಯನ್ ಪ್ರಭಾವಗಳ ಬಗ್ಗೆ ಎಂದಿಗೂ ಮುಕ್ತವಾಗಿ ಮಾತನಾಡುತ್ತಿದ್ದರು. ತಮ್ಮ ಆತ್ಮಕಥೆಯಲ್ಲಿ, ನೆಹರು ಅವರು ತಮ್ಮ ಮೇಲೆ ಪ್ರಭಾವ ಬೀರಿದ ಯುರೋಪಿಯನ್ ಲೇಖಕರನ್ನು ಪಟ್ಟಿ ಮಾಡುತ್ತಾರೆ. ರುಡ್ಯಾರ್ಡ್ ಕಿಪ್ಲಿಂಗ್, ಲೂಯಿಸ್ ಕ್ಯಾರೋಲ್ ಮತ್ತು ಸ್ಪ್ಯಾನಿಷ್ ಲೇಖಕ ಮಿಗೇಲ್ ಡೆ ಸರ್ವಾಂಟೆಸ್ ಅವರ ಕೃತಿಗಳಲ್ಲದೆ, "(ವಾಲ್ಟರ್) ಸ್ಕಾಟ್, (ಚಾರ್ಲ್ಸ್) ಡಿಕನ್ಸ್ ಮತ್ತು (ವಿಲಿಯಂ ಮೇಕ್‌ಪೀಸ್) ಥ್ಯಾಕರೆ ಅವರ ಅನೇಕ ಕಾದಂಬರಿಗಳು, ಎಚ್.ಜಿ. ವೆಲ್ಸ್ ಅವರ ಪ್ರೇಮ ಕಾದಂಬರಿಗಳು, ಮಾರ್ಕ್ ಟ್ವೇನ್ ಮತ್ತು ಶೆರ್ಲಾಕ್

ಹೋಮ್ಸ್ ಅವರ ಕೃತಿಗಳನ್ನು ಓದುತ್ತಿದ್ದುದು ನನಗೆ ನೆನಪಿದೆ. ದಿ ಪ್ರಿಸನರ್ ಆಫ್ ಝೆಂಡಾ ಓದಿ ನನಗೆ ರೋಮಾಂಚನವಾಗಿತ್ತು, ಮತ್ತು ಜೆರೋಮ್ ಕೆ. ಜೆರೋಮ್ ಅವರ ಥ್ರೀ ಮೆನ್ ಇನ್ ಎ ಬೋಟ್ ನನ್ನ ದೃಷ್ಟಿಯಲ್ಲಿ ಹಾಸ್ಯದ ಪರಾಕಾಷ್ಠೆಯಾಗಿತ್ತು" ಎಂದು ಅವರು ಬರೆಯುತ್ತಾರೆ.
"ಭಾರತದ ಅಸ್ಮಿತೆ ಬೇರಿಲ್ಲದ್ದಾಗಲು ಸಾಧ್ಯವೇ? ಅದು ಸಂಪೂರ್ಣವಾಗಿ ಕೆಲವು ಅತಿ ಕ್ಲಿಷ್ಟವಾದ ಸಂವಿಧಾನಾತ್ಮಕ ಸಿದ್ಧಾಂತಗಳ ಮೇಲೆ ಮಾತ್ರ ಆಧಾರಿತವಾಗಿರಲು ಸಾಧ್ಯವೇ?" ಎಂದು ರಾಜ್ಯಸಭಾ ಸದಸ್ಯರಾದ ಸ್ವಪನ್ ದಾಸ್‌ಗುಪ್ತ ಪ್ರಶ್ನಿಸುತ್ತಾರೆ. "ಇಲ್ಲಿ ಒಂದೆಡೆ (ನೆಹರು ಅವರ) ಸಂವಿಧಾನಾತ್ಮಕ ದೇಶಭಕ್ತಿ ಮತ್ತು ಇನ್ನೊಂದೆಡೆ ಸ್ವಾತಂತ್ರ್ಯ ಹೋರಾಟದ ಪ್ರತ್ಯಕ್ಷ ಉತ್ತರಾಧಿಕಾರವೆನಿಸಿದ ಅತ್ಯಂತ ಗಹನವಾದ ರಾಷ್ಟ್ರೀಯತೆ ಪರಸ್ಪರ ಮುಖಾಮುಖಿಯಾಗಿವೆ. ನೆಹರು ಅವರ ಪರಂಪರೆಯನ್ನು ಪ್ರಶ್ನಿಸಲಾಗುತ್ತಿರುವುದು ಇದೇ ನೆಲೆಯಲ್ಲಿ," ಎಂದು ಅವರು ಹೇಳುತ್ತಾರೆ.

ಇಷ್ಟಾದರೂ, 'ಡಿಸ್ಕವರಿ ಆಫ್ ಇಂಡಿಯಾ' ಕೃತಿಯ ಕರ್ತೃ, ನೆಹರು ಅವರ ವಿರುದ್ಧ ಹೊರಿಸಲಾದ ಈ ಆರೋಪ ಕೆಲವು ಇತಿಹಾಸಕಾರರನ್ನು ದಿಗ್ಭ್ರಮೆಗೊಳಿಸಿದೆ. 'ಭಾರತ ತ್ಯಜಿಸಿ' ಚಳವಳಿಯ ಸಮಯದಲ್ಲಿ ಜೈಲಿನಲ್ಲಿ ಇದ್ದಾಗ ನೆಹರು ಈ ಕೃತಿಯನ್ನು ರಚಿಸಿದ್ದರು. ಇದು ಒಂದು ವ್ಯಕ್ತಿ ನಮ್ಮ ರಾಷ್ಟ್ರವನ್ನು – ಅದರ ಇತಿಹಾಸ ಮತ್ತು ಭೂಗೋಳವನ್ನು, ಅದರ ಪೌರಾಣಿಕ ಕಥೆಗಳು ಮತ್ತು ದಂತಕಥೆಗಳನ್ನು, ಮಹಾಕಾವ್ಯಗಳು ಹಾಗೂ ಪ್ರಾಚೀನ ಗ್ರಂಥಗಳನ್ನು – ಅನ್ವೇಷಿಸಲು ಹೊರಡುವ ಪ್ರಯಾಣವನ್ನು ಗುರುತಿಸುವ ಪುಸ್ತಕವಾಗಿದೆ.

"ನೆಹರು ಅವರಿಗೆ ಸಂಸ್ಕೃತಿ ಅತ್ಯಂತ ಮಹತ್ವದ್ದಾಗಿತ್ತು. ಅವರು ಭಾರತೀಯ ಸಂಸ್ಕೃತಿಯನ್ನು ತೀವ್ರವಾಗಿ ಪ್ರೀತಿಸುವ ಅನನ್ಯವಾದ ಜಾತ್ಯತೀತವಾದಿಯಾಗಿದ್ದರು. ಅವರ ಭಾರತೀಯ ಸಂಸ್ಕೃತಿಯ ಮೇಲಿನ ಪ್ರೀತಿ ಕೇವಲ ಬೌದ್ಧಿಕ ಪ್ರೀತಿಯಲ್ಲ. ಈ ಪ್ರೀತಿಯಿಲ್ಲದೆ ಅವರು ದೇಶದ ಭೂಗೋಳ ಮತ್ತು ಪರಂಪರೆಯ ಕುರಿತು ಅವರು ಮಾತನಾಡಿದ ರೀತಿಯಲ್ಲಿ ಮಾತನಾಡಲು ಸಾಧ್ಯವೇ ಇರಲಿಲ್ಲ," ಎಂದು ಇತಿಹಾಸಕಾರ ಸುಧೀರ್ ಚಂದ್ರ ಹೇಳಿದ್ದಾರೆ.

ಆರ್.ಎಸ್.ಎಸ್. ಮತ್ತು ನೆಹರು ಇಬ್ಬರೂ ಭಾರತೀಯ ಸಂಸ್ಕೃತಿಯ ಬಗ್ಗೆ ಬಹಳ ಗೌರವವಿಟ್ಟು ಮಾತಾಡುತ್ತಿದ್ದರೂ, ಅವರ "ಭೂತ, ವರ್ತಮಾನ ಮತ್ತು ಭವಿಷ್ಯದ ಅಭಿಪ್ರಾಯವು ಮೂಲಭೂತವಾಗಿ ಪರಸ್ಪರ ವಿರುದ್ಧವಾಗಿದೆ" ಎಂದು ಚಂದ್ರ ಅವರು ಹೇಳುತ್ತಾರೆ. ಹೀಗಾಗಿ, ಭಾರತದ ಕಳೆದುಹೋದ 'ಸುವರ್ಣ ವೈದಿಕ ಯುಗ'ವನ್ನು ಶೋಧಿಸಲು ಪ್ರಯತ್ನಿಸುತ್ತಾ, ಇಸ್ಲಾಮಿಕ್ ಆಕ್ರಮಣವನ್ನು ದೇಶ ಕಂಡ ಅತ್ಯಂತ ಅಂಧಕಾರದ ಹಂತವೆಂದು ಆರ್.ಎಸ್.ಎಸ್. ಪರಿಗಣಿಸಿದರೆ, ನೆಹರು ಅವರು ಇಸ್ಲಾಂ ಮತವು ದೇಶಕ್ಕೆ ಮಹತ್ವದ ಸಾಂಸ್ಕೃತಿಕ ವಿವಿಧತೆಯನ್ನು ನೀಡಿತು ಎಂದು ನಂಬಿದ್ದರು.

ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನಲ್ಲಿ ನೆಹರು ಅವರು ಕಳೆದ ದಿನಗಳು ಅವರ ಮೇಲೆ ಆಳವಾದ ಪ್ರಭಾವ ಬೀರಿದ್ದವು; ಅವರು ತೆಗೆದುಕೊಂಡ ಅನೇಕ ನಿಲುವುಗಳಲ್ಲಿ ಅದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ನೆಹರು ಅವರು ರಾಜಕೀಯಕ್ಕೆ ಪ್ರವೇಶಿಸಿದಾಗ, ಆಧ್ಯಾತ್ಮಿಕತೆ ತಮ್ಮ ರಾಜಕೀಯದ ಅವಿಭಾಜ್ಯ ಅಂಗವಾಗಿದ್ದ ಮಹಾತ್ಮ ಗಾಂಧಿಯವರಂತಲ್ಲದೆ – ಧರ್ಮವನ್ನು ರಾಜಕೀಯದಿಂದ ಕಟ್ಟುನಿಟ್ಟಾಗಿ ದೂರವಿಟ್ಟರು. ಇದು ರಾಜಕೀಯ ಬಲಪಂಥದವರಿಗೆ ಸಹನೀಯವಾಗದೆ, ನೆಹರು ಅವರನ್ನು 'ಹಿಂದೂ ವಿರೋಧಿ' ಎಂದು ಕರೆದರು.

ಗಾಂಧೀಜಿಯವರ ನಿಧನದ ನಂತರ, ನಾವು ನೆಹರು ಅವರ ದಿಕ್ಕಿನಲ್ಲಿ ಸಾಗಿದೆವು; ಕೆಲವೊಮ್ಮೆ ಧರ್ಮವಿರೋಧಿ ಅಥವಾ ಅಧಾರ್ಮಿಕತೆಯ ಮಟ್ಟಕ್ಕೂ ತಲುಪಿದ್ದೆವು," ಎಂದು ಭಾರತೀಯ ಜನತಾ ಪಕ್ಷದ (ಬಿ.ಜೆ.ಪಿ.) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾದ ಪಿ. ಮುರಳೀಧರ ರಾವ್ ಅವರು ಹೇಳುತ್ತಾರೆ. ಹಿರಿಯ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್.ಎಸ್.ಎಸ್.) ತತ್ತ್ವಜ್ಞ ಎಂ. ಜಿ. ವೈದ್ಯ ಕೂಡ ಇದನ್ನು ಒಪ್ಪುತ್ತಾರೆ. "ಹಿಂದೂ ರಾಷ್ಟ್ರದ ಕುರಿತು ನೆಹರು ಹೊಂದಿದ್ದ ಕಲ್ಪನೆಯೇ ಆರ್.ಎಸ್.ಎಸ್ ಅವರನ್ನು ವಿರೋಧಿಸುವುದಕ್ಕೆ ಕಾರಣ. ಅದು ಬಹಳ ಸಂಕುಚಿತವಾದ ಆಲೋಚನೆ ಎಂದು ಅವರು ಭಾವಿಸಿದ್ದರು; ಆದರೆ ಹಿಂದೂತ್ವದಲ್ಲಿ ಯಾವುದೇ ಸಂಕುಚಿತತೆ ಇಲ್ಲ,"

ಸಿನ್ಹಾ ಮುಂದುವರಿದು ಹೀಗೆನ್ನುತ್ತಾರೆ: "ನೆಹರು ಅವರು ತಮ್ಮ ಪ್ರಭಾವ ಮತ್ತು ಸರ್ಕಾರದ ಅಧಿಕಾರವನ್ನು ಬಳಸಿ ಭಾರತದ ವಾಸ್ತವಿಕತೆಗಳನ್ನು ಹತ್ತಿಕ್ಕಿ ಪಶ್ಚಿಮದ ಯಥಾವತ್ ನಕಲು ಮಾದರಿಯನ್ನು ಪರಿಚಯಿಸಿ ಅದನ್ನೇ ಭಾರತದ ಕಲ್ಪನೆ ಎಂಬಂತೆ ರೂಪಿಸಿದರು." ಇದಕ್ಕೆ ಪ್ರತಿಯಾಗಿ, ನೆಹರುವಾದಿಗಳು ಡಿಸ್ಕವರಿ ಆಫ್ ಇಂಡಿಯಾ ಕೃತಿಯ ಪುಟಗಳನ್ನು ತಿರುಗಿಸಿ, ಭಾರತದ ಭೂಗೋಳದ ಕುರಿತು ಅವರು ನೀಡಿದ ವಿವರಣೆಯನ್ನು ಮತ್ತು ಅದು ಆರ್.ಎಸ್.ಎಸ್.ನ 'ಅಖಂಡ ಭಾರತ'ದ ಕಲ್ಪನೆಯೊಂದಿಗೆ ತಾಳೆಯಾಗುವ ಅಂಶಗಳನ್ನು ಉಲ್ಲೇಖಿಸುತ್ತಾರೆ. ನೆಹರು ಅದರಲ್ಲಿ ಹೀಗೆ ಬರೆಯುತ್ತಾರೆ: "ಭಾರತದ ವೈವಿಧ್ಯತೆ ಅತ್ಯಮೋಘವಾದುದು... ಆದರೂ, ಈ ಎಲ್ಲ ಭಿನ್ನತೆಗಳ ನಡುವೆಯೂ ಒಬ್ಬ ಪಠಾಣನ ಮೇಲೆ ಅಚ್ಚೊತ್ತಿರುವ ಭಾರತದ ಮುದ್ರೆಯನ್ನು ಕಡೆಗಣಿಸಲು ಸಾಧ್ಯವಿಲ್ಲ; ಅದೇ ರೀತಿ ಅದು ಒಬ್ಬ ತಮಿಳನ ಮೇಲೂ ಸ್ಪಷ್ಟವಾಗಿ ಕಾಣಿಸುತ್ತದೆ. ಇದು ಆಶ್ಚರ್ಯಕರವಲ್ಲ; ಏಕೆಂದರೆ ಈ ಗಡಿಭಾಗಗಳು, ಆಫ್ಘಾನಿಸ್ತಾನ ಹಾಗೂ ಮಧ್ಯ ಏಷ್ಯಾದ ಕೆಲವು ಭಾಗಗಳು ಇಸ್ಲಾಂನ ಅಗಮನಕ್ಕೂ ಮುಂಚೆ ಬಹುತೇಕ ಬೌದ್ಧ ಧರ್ಮದ ಪ್ರಭಾವಕ್ಕೊಳಗಾಗಿದ್ದವು; ಅದಕ್ಕೂ ಮೊದಲು ಮಹಾಕಾವ್ಯಗಳ ಕಾಲದಲ್ಲಿ ಹಿಂದೂ ಧರ್ಮದ ಪ್ರಭಾವಕ್ಕೊಳಗಾಗಿದ್ದವು."

ಇದನ್ನು ಒಬ್ಬ ಹಿಂದು-ವಿರೋಧಿ ಬರೆಯಲು ಸಾಧ್ಯವೇ?

ಆದರೆ, ಆರ್.ಎಸ್.ಎಸ್.ನ ದೆಹಲಿ ಉಪಾಧ್ಯಕ್ಷರಾದ ಆಲೋಕ್ ಕುಮಾರ್ ಅವರು, "ನೆಹರು ಅವರ ಕ್ರಿಯೆಗಳು ಭಾರತೀಯ ಸಾಂಸ್ಕೃತಿಕ ಮೌಲ್ಯಗಳ ಮೇಲೆ ಆಧಾರಿತವಾಗಿರಲಿಲ್ಲ. ಬೌದ್ಧಿಕವಾಗಿ ಅವರು ಭಾರತೀಯ ಇತಿಹಾಸ ಮತ್ತು ಅದರ ಆಧ್ಯಾತ್ಮಿಕ ಸಾಹಿತ್ಯವನ್ನು ಅರಿತಿದ್ದಿರಬಹುದು; ಆದರೆ ತಮ್ಮನ್ನು ತಾವೇ ಕರೆದುಕೊಂಡಂತೆ, ಅವರೊಬ್ಬ 'ಆಕಸ್ಮಿಕ ಹಿಂದೂ' ಎಂಬುದೇ ಬಹುಶಃ ಸೂಕ್ತವಾಗಿತ್ತು," ಎಂದು ವಾದಿಸುತ್ತಾರೆ.

ಇತರ ಸಂಘ ಪರಿವಾರದ ನಾಯಕರು ನೆಹರು ಅವರಿಗೆ ಭಾರತೀಯ ಸಂಸ್ಕೃತಿಯ ಮೇಲೆ ಇದ್ದ ಪ್ರೀತಿಯನ್ನು ಪಾಖಂಡ್ (ನಕಲಿ) ಎಂದೂ, ಅದೊಂದು ಕೇವಲ ವ್ಯಾವಹಾರಿಕವಾಗಿ ಅಗತ್ಯವಾಗಿದ್ದ ಪ್ರೀತಿಯೆಂದೂ ಕರೆಯುತ್ತಾರೆ. "ಭಾರತೀಯ ಸಂಸ್ಕೃತಿಯ ಮೇಲೆ ಪ್ರೀತಿಯನ್ನು ಪ್ರದರ್ಶಿಸದೇ ಹೋಗಿದ್ದರೆ ಅವರೊಬ್ಬ ಜನಪ್ರಿಯ ಪ್ರಧಾನಮಂತ್ರಿಯಾಗಲು ಸಾಧ್ಯವಾಗುತ್ತಿರಲಿಲ್ಲ," ಎಂದು 1950ರ ದಶಕದಲ್ಲಿ ಪಾಂಚಜನ್ಯ ಪತ್ರಿಕೆಯ ಸಂಪಾದಕರಾಗಿದ್ದ ಆರ್.ಎಸ್.ಎಸ್.ನ ತತ್ತ್ವಜ್ಞರಾದ ದೇವೇಂದ್ರ ಸ್ವರೂಪ್ ಹೇಳುತ್ತಾರೆ.

ಇತಿಹಾಸಕಾರರಾದ ರಾಮಚಂದ್ರ ಗುಹಾ ಅವರು ಈ "ವ್ಯಕ್ತಿತ್ವದ ತೇಜೋವಧೆ"ಗೆ ತೀವ್ರವಾಗಿ ಮರುವಾದಿಸುತ್ತಾರೆ. "ಡಿಸ್ಕವರಿ ಆಫ್ ಇಂಡಿಯಾ" ಕೃತಿಯು ಈ ದೇಶದ ಬಗ್ಗೆ ನೆಹರು ಅವರಿಗಿರುವ ಗಾಢವಾದ ಪ್ರೀತಿ ಮತ್ತು ತಿಳುವಳಿಕೆಯಿಂದ ತುಂಬಿಹೋಗಿದೆ. ಇಂತಹ ಪುಸ್ತಕ ಅದು ಹೇಗೆ ಪಾಖಂಡ ಆಗುತ್ತದೆ?" ಎಂದು ಗುಹಾ

ಪ್ರಶ್ನಿಸುತ್ತಾರೆ. “ನೆಹರು ಭಾರತವನ್ನು ದ್ವೇಷಿಸುತ್ತಿದ್ದರು” ಎಂದು ಹೇಳುವುದು ಸಂಪೂರ್ಣ ತಪ್ಪು ಎಂದು ಅವರು ಸೇರಿಸುತ್ತಾರೆ.

ಕಾಂಗ್ರೆಸ್ ನಾಯಕರದ ಜೈರಾಮ್ ರಮೇಶ್ ಅವರು ಈ ತೇಜೋವಧೆಯ ಹಿಂದೆ ಒಂದು ವ್ಯವಸ್ಥಿತ ಯೋಜನೆ ಕಾಣಿಸುತ್ತದೆ ಎಂದು ಹೇಳುತ್ತಾರೆ. “ಆರ್.ಎಸ್.ಎಸ್.ಗೆ ಎರಡು-ಮಾರ್ಗದ ನೀತಿ ಇದೆ – ಒಬ್ಬ ವ್ಯಕ್ತಿಯ ಹೆಸರಿಗೆ ಮಸಿ ಬಳಿಯುವುದು ಮತ್ತು ಅವರ ಪರಂಪರೆಯನ್ನು ಅಮಾನ್ಯಗೊಳಿಸುವುದು,” ಎಂದು ಅವರು ಹೇಳುತ್ತಾರೆ. “ನೆಹರು ಅವರು ಧೂಮಪಾನ ಮಾಡುತ್ತಿದ್ದರೆ ಏನೀಗ? ಧೂಮಪಾನ ಮಾಡುವ ಬಿ.ಜೆ.ಪಿ. ನಾಯಕರೂ ಇದ್ದಾರೆ. ನೆಹರು ಅವರಿಗೆ ಎಡ್ವಿನಾ ಮೌಂಟ್‌ಬ್ಯಾಟನ್ ಅವರೊಂದಿಗೆ ಸಂಬಂಧವಿದ್ದರೆ ಏನೀಗ? ವಾಜಪೇಯಿ ಅವರಿಗೆ ಶ್ರೀಮತಿ (ರಾಜಕುಮಾರಿ) ಕೌಲ್ ಅವರೊಂದಿಗೆ ಇದ್ದ ಸಂಬಂಧದ ಬಗ್ಗೆ ಹೇಳಬಹುದಲ್ಲವೆ? ಇವೆಲ್ಲವೂ ವೈಯಕ್ತಿಕ ವಿಚಾರಗಳು,” ಎಂದು ಅವರು ಪ್ರಶ್ನಿಸುತ್ತಾರೆ.

**”ಸಮಾಜವಾದ ಮತ್ತು ಜಾತ್ಯತೀತವಾದದ ತಪ್ಪು ಕಲ್ಪನೆಗಳು”**

ನೆಹರು ಅವರ ವಿರುದ್ಧ ಇರುವ ಎರಡನೇ ಆರೋಪವೆಂದರೆ, ಮುರಳೀಧರ ರಾವ್ ಅವರು ಹೇಳುವಂತೆ, ಅವರ “ಪಶ್ಚಿಮದಿಂದ ಆಮದು ಮಾಡಿಕೊಂಡ ಜಾತ್ಯತೀತತೆ” ಮತ್ತು “ರಷ್ಯಾದಿಂದ ಆಮದು ಮಾಡಿಕೊಂಡ ಸಮಾಜವಾದ”ಗಳು “ಭಾರತ ದೇಶದ ವಾಸ್ತವಿಕತೆಗಳಿಗೆ ಹೊಂದುತ್ತಿರಲಿಲ್ಲ” ಎಂಬುದು. ನೆಹರು ಅವರ ಆರ್ಥಿಕ ಕಾರ್ಯನೀತಿಯು ಸರ್ಕಾರ ತೋರುವ ಬಲವಾದ ನಿಯಂತ್ರಣದ ಮೇಲೆ ಆಧಾರಿತವಾಗಿತ್ತು – ಈ ಮಾದರಿಯನ್ನು ಇನ್ನೂ ಸಂಪೂರ್ಣವಾಗಿ ತ್ಯಜಿಸಿಲ್ಲ. ಐ.ಜಿ.ಎನ್.ಸಿ.ಎ.ಯ ರಾಯ್ ಅವರು, ನೆಹರು ಅವರು “ಮಾರ್ಕ್ಸವಾದದ ದೃಷ್ಟಿಕೋನದಿಂದ ಭಾರತವನ್ನು ಕಂಡರು, ಮತ್ತು ಸೋವಿಯತ್ ಮಾದರಿಯ ಅಭಿವೃದ್ಧಿಯನ್ನು ಜಾರಿಗೊಳಿಸಿದರು” ಎಂದು ಹೇಳುತ್ತಾರೆ.

ನೆಹರು ಅವರ ಜಾತ್ಯತೀತತೆಯ ಕುರಿತು ದಾಸ್‌ಗುಪ್ತ ಅವರು “ಅಲ್ಪಸಂಖ್ಯಾತರಿಗೆ ವಿಶೇಷ ಭರವಸೆಗಳು ಇರುವ ವಿಶ್ವಬಂಧುತ್ವದ ಕಲ್ಪನೆ”ಯನ್ನು ಪ್ರಶ್ನಿಸುತ್ತಾರೆ. “ಬಹುಸಂಖ್ಯಾತರಿಗೆ ವಿಶ್ವಪ್ರಜೆಯ ಅಸ್ಮಿತೆ ಕೊಟ್ಟು ಅಲ್ಪಸಂಖ್ಯಾತರಿಗೆ ಮಾತ್ರ ತಮ್ಮದೇ ವರ್ಗೀಯ ಅಸ್ಮಿತೆಯನ್ನು ಉಳಿಸಿಕೊಳ್ಳಲು ಅವಕಾಶ ನೀಡಲಾಗಿದೆ… ಇದರ ಪರಿಣಾಮವಾಗಿ ಒಂದು ಕಡೆ ಹಿಂದೂ ಅಸ್ಮಿತೆ ಸಾಕಷ್ಟು ಗಣನೀಯವಾಗಿ ಕ್ಷೀಣಿಸುತ್ತಾ ಹೋದರೆ; ಇನ್ನೊಂದು ಕಡೆ ಧೃಡವಾದ ಮುಸ್ಲಿಂ ಅಸ್ಮಿತೆ ಮಾತ್ರ ಇಂದಿಗೂ ಹಾಗೇ ಉಳಿದಿದೆ,” ಎಂದು ಹೇಳುತ್ತಾರೆ.

ಕಾಂಗ್ರೆಸ್ ಪಕ್ಷವು ಈ ವಿಷಯದಲ್ಲಿ ಅಷ್ಟು ಚೆನ್ನಾಗಿ ಕಾರ್ಯನಿರ್ವಹಿಸಲಿಲ್ಲ ಎಂಬುದನ್ನು ಕಾಂಗ್ರೆಸ್ ನಾಯಕರು ಒಪ್ಪಿಕೊಳ್ಳುತ್ತಾರೆ. “ಬಹುಸಂಖ್ಯಾತ ಕೋಮುವಾದವನ್ನು ಖಂಡಿಸಲು ನಾವು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಆದರೆ ಅಲ್ಪಸಂಖ್ಯಾತ ಕೋಮುವಾದವನ್ನು ಖಂಡಿಸಲು ಮೀನಮೇಷ ಎಣಿಸುತ್ತೇವೆ ಎಂಬ ಧೋರಣೆಗೆ ಹೆಚ್ಚು ಬೆಂಬಲ ವ್ಯಕ್ತವಾಗುತ್ತಿದೆ,” ಎಂದು ರಮೇಶ್ ಅವರು ಒಪ್ಪಿಕೊಳ್ಳುತ್ತಾರೆ. ಅವರು ಮುಂದುವರಿದು, “ನೆಹರು ಅವರು ಅಲ್ಪಸಂಖ್ಯಾತ ಕೋಮುವಾದಕ್ಕೆ ಸಂಪೂರ್ಣವಾಗಿ ವಿರೋಧಿಯಾಗಿದ್ದರು. ಈಗ ಹಿಂದಿರುಗಿ ನೋಡಿದಾಗ, ಕಾಂಗ್ರೆಸ್ ಪಕ್ಷ ಅದನ್ನು ಇನ್ನಷ್ಟು ಬಲವಾಗಿ ಖಂಡಿಸಬೇಕಾಗಿತ್ತು ಎಂದು ಅನ್ನಿಸುತ್ತದೆ,” ಎಂದು ಹೇಳುತ್ತಾರೆ.

ಸಂಘಕ್ಕೆ ನೆಹರು ಅವರ ವಿರುದ್ಧ ಇರುವ ವೈಷಮ್ಯಕ್ಕೆ ಮತ್ತೊಂದು ಕಾರಣವೇನೆಂದರೆ, 1948ರಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ಆರ್.ಎಸ್.ಎಸ್.ನ ಮೇಲೆ ವಿಧಿಸಲಾದ ನಿಷೇಧ. “ನೆಹರು ಅವರಿಗೆ

ಆರ್.ಎಸ್.ಎಸ್. ಒಂದು ಕೋಮುವಾದಿ ಸಂಘಟನೆಯೆಂದು ಸಾಧಿಸಿ ತೋರಿಸಬೇಕೆಂದಿತ್ತು. ಆರ್.ಎಸ್.ಎಸ್.ಅನ್ನು ನಿಷೇಧಿಸಲು ಅವರು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಬಲವಂತ ಮಾಡಿದರು. ಒಂದು ಅವಕಾಶಕ್ಕಾಗಿ ಅವರು ಕಾಯುತ್ತಿದ್ದರಷ್ಟೆ," ಎಂದು ಆ ನಿಷೇಧವನ್ನು ಸಮೀಪದಿಂದಲೇ ಕಂಡ ಸ್ವರೂಪ್ ಹೇಳುತ್ತಾರೆ.

ಐ.ಜಿ.ಎನ್.ಸಿ.ಎ.ಯ ರೈ ಅವರು ನೆಹರು ಅವರು "ಆರ್.ಎಸ್.ಎಸ್. ಕೋಮುವಾದಿ ಮತ್ತು ಮುಸ್ಲಿಂ ವಿರೋಧಿ ಎಂಬ ಕಲ್ಪನೆಯನ್ನು ಸ್ಥಾಪಿಸಿದರು" ಎಂಬ ಆರೋಪವನ್ನು ಸಹ ಮಾಡುತ್ತಾರೆ. "ಗಾಂಧಿ ಮತ್ತು ಅಂಬೇಡ್ಕರ್ ಮುಕ್ತ ಮನಸ್ಸಿನವರಾಗಿದ್ದರು. ಸಂಘ ತಪ್ಪು ಮಾಡಿದರೆ ಅದನ್ನು ಅವರು ಬೆರಳೆತ್ತಿ ತೋರುತ್ತಿದ್ದರು; ಸಂಘವು ಒಳ್ಳೆಯ ಕೆಲಸ ಮಾಡಿದರೆ ಪ್ರಶಂಸಿಸುತ್ತಿದ್ದರು. ಆದರೆ ನೆಹರು ಅವರಿಗೆ ಪೂರ್ವಗ್ರಹದ ವಿಚಾರಗಳಿದ್ದವು," ಎಂದು ಅವರು ಹೇಳುತ್ತಾರೆ.

ನೆಹರು ಮತ್ತು ಸಂಘದ ನಡುವೆ ಇದ್ದ ತಾತ್ವಿಕ ವಿರೋಧವನ್ನು "ಎರಡೂ ಬದಿಯಿಂದಲು ಪರಸ್ಪರ ವ್ಯಕ್ತಪಡಿಸಲಾಗಿತ್ತು" ಎಂದು ಗುಹಾ ವಿವರಿಸುತ್ತಾರೆ. "ನೆಹರು ಆರ್.ಎಸ್.ಎಸ್. ಅನ್ನು ತೀವ್ರವಾಗಿ ದ್ವೇಷಿಸುತ್ತಿದ್ದರು; ಅದೊಂದು ಅಪಾಯಕಾರಿ ಮತ್ತು ವಿಭಜಕ ಸಂಘಟನೆಯನ್ನಾಗಿ ಕಾಣುತ್ತಿದ್ದರು. ಅವರ ವಿಶ್ವಪ್ರಜೆಯ ದೃಷ್ಟಿಕೋನವು ಆರ್.ಎಸ್.ಎಸ್.ನ ವಿದೇಶಿ ವಿರೋಧಿ ಮನೋಭಾವಕ್ಕೆ ವಿರುದ್ಧವಾಗಿತ್ತು; ಹಾಗೆಯೇ ಆಧುನಿಕ ವಿಜ್ಞಾನಕ್ಕೆ ಅವರು ನೀಡಿದ ಮಹತ್ವವು, ಹಿಂದೂ ಜ್ಞಾನವನ್ನು ಮೆರೆಸುವ ಸಂಘದ ನಿಲುವಿಗೆ ವಿರುದ್ಧವಾಗಿತ್ತು…"

ಆದರೆ ಸಂಘವು ಇತ್ತೀಚೆಗೆ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಸ್ವೀಕರಿಸಿರುವುದನ್ನು ಹೇಗೆ ವಿವರಿಸಬಹುದು? "ಗಾಂಧಿ ಮತ್ತು ಅಂಬೇಡ್ಕರ್ ಅವರ ವಿಷಯದಲ್ಲಿ ಸಂಘದವರು, ಸತ್ಯಾಂಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳಬಹುದು, ಸತ್ಯವನ್ನು ಹೇಳುವಾಗ ಅವರಿಗೆ ಬೇಕಾದಷ್ಟು ಮಾತ್ರ ಹೇಳಿ ಉಳಿದದ್ದನ್ನು ಮರೆಮಾಚಬಹುದು. ಗಾಂಧಿ ಮತ್ತು ಅಂಬೇಡ್ಕರ್ ಅವರುಗಳನ್ನು ಕುರಿತ ತಮ್ಮ ವಿರೋಧವನ್ನು ತಪ್ಪಾಗಿ ಪ್ರತಿನಿಧಿಸಬಹುದು. ಆದರೆ ನೆಹರು ವಿಷಯಕ್ಕೆ ಬಂದಾಗ ಅದು ಇನ್ನಷ್ಟು ಆಳವಾದ ಮತ್ತು ಮೂಲಭೂತವಾದ ವಿರೋಧವಾಗಿದೆ," ಎಂದು ಗುಹಾ ಅವರು ಸೇರಿಸುತ್ತಾರೆ.

ಚಂದ್ರ ಅವರು ಇದನ್ನು ಅಂಗೀಕರಿಸುತ್ತಾರೆ. "ಗಾಂಧೀಜಿ ಒಮ್ಮೆ ಸಂಘದ ಸಭೆಯೊಂದರಲ್ಲಿ ಭಾಷಣ ಮಾಡಿದ್ದರು. ಆದರೆ ನೆಹರು ಅವರಿಗೆ ಅದು ಸಾಧ್ಯವಿರಲಿಲ್ಲ," ಎಂದು ಅವರು ಹೇಳುತ್ತಾರೆ. ಇದನ್ನು ಆರ್.ಎಸ್.ಎಸ್. ಕೂಡ ಒಪ್ಪಿಕೊಳ್ಳುತ್ತದೆ. "ಸಂಘಕ್ಕೆ ನೆಹರು ಅವರ ಕುರಿತು ಆಳವಾದ ಅಸಹಿಷ್ಣುತೆ ಇದೆ. ಅದು ಪೀಳಿಗೆಗಳಿಂದ ಮುಂದುವರಿದುಕೊಂಡು ಬಂದಿದೆ," ಎಂದು ಸ್ವರೂಪ್ ಹೇಳುತ್ತಾರಾದರೂ ಗಾಂಧಿ ಮತ್ತು ಅಂಬೇಡ್ಕರ್ ಕುರಿತು ಸಂಘದ ನಿಲುವಿನಲ್ಲಿ ಕಂಡುಬಂದ ಬದಲಾವಣೆಯು ಸಂಘದ ರಾಜಕೀಯ ಸಮಯೋಚಿತತೆ– "ಒಂದು ರಾಜಕೀಯ ಆಟ"ದ – ಕಾರಣದಿಂದ ಉಂಟಾಯಿತು ಎಂಬುದನ್ನೂ ಅವರು ಒಪ್ಪಿಕೊಳ್ಳುತ್ತಾರೆ.

"ಅಂಬೇಡ್ಕರ್ ಮತ್ತು ಪ್ರತಿಯೊಬ್ಬ ಅಂಬೇಡ್ಕರ್ ವಾದಿಯೂ ಹಿಂದೂ ವಿರೋಧಿಯೇ," ಎಂದೂ ಅವರು ಸೇರಿಸುತ್ತಾರೆ, "(ಆದರೆ) ನಮ್ಮ ಮುಂದೆ ಇರುವ ಸಮಸ್ಯೆ ಏನೆಂದರೆ, ದಲಿತ ಚಳವಳಿಯು ಅಂಬೇಡ್ಕರ್ ಅವರನ್ನು ತಮ್ಮ ಆದರ್ಶವಾಗಿ ಸ್ವೀಕರಿಸಿರುವುದರಿಂದ, ಅವರನ್ನು ನಾವು ನಿರ್ಲಕ್ಷಿಸಲು ಸಾಧ್ಯವಿಲ್ಲ. ಗಾಂಧೀಜಿ ಇಂದಿಗೂ ಪ್ರಸ್ತುತರು. ಗಾಂಧಿಯವರ ಸಂಪೂರ್ಣ ವ್ಯಕ್ತಿತ್ವವೇ ಹಿಂದೂ ವ್ಯಕ್ತಿತ್ವವಾಗಿದೆ."

ಸ್ವರೂಪ್ ಮತ್ತು ರೈ, ನೆಹರು ಅವರು ದೇಶದ ವಿಭಜನೆಗೆ ನೀಡಿದ "ಕೊಡುಗೆ"ಯ ಬಗ್ಗೆ ಮಾತನಾಡುತ್ತಾರೆ, ಆದರೆ ಆಲೋಕ್ ಕುಮಾರ್ ಅವರು ಒಮ್ಮೆ ಗಾಂಧೀಜಿಯನ್ನೂ ಅದಕ್ಕೆ ಹೊಣೆಗಾರರನ್ನಾಗಿ ಮಾಡಲಾಗಿತ್ತು, ಆದರೆ ಈಗ ಹಾಗಿಲ್ಲ ಎಂದು ಹೇಳುತ್ತಾರೆ. "ಆ ಪೀಳಿಗೆ (ಗಾಂಧೀಜಿಯನ್ನು ಇಷ್ಟಪಡದವರು) ಹೆಚ್ಚುಕಮ್ಮಿ ಹೊರಟೇಹೋಗಿದೆ," ಎಂದು ಅವರು ಹೇಳುತ್ತಾರೆ.

ಆದರೂ ನೆಹರು ವಿರುದ್ಧ ಇಂತಹ "ಅಭಿಪ್ರಾಯಗಳು" ಇನ್ನೂ ಅಸ್ತಿತ್ವದಲ್ಲಿವೆ. ಗುಹಾ ಇದನ್ನು ಖಂಡಿಸುತ್ತಾ ಹೀಗೆನ್ನುತ್ತಾರೆ: "(ಸಮಾಜಶಾಸ್ತ್ರಜ್ಞ) ಆಶಿಸ್ ನಂದಿ ಅವರು ಹೇಳುವಂತೆ, ಅವರು ಸಂಘದ ಆಪ್ತ ಶತ್ರು. ನೆಹರು ಅವರು ಸಂಘದೊಳಗೇ ಸೇರಿಹೋಗಿದ್ದಾರೆ."

**ಕುಟುಂಬದ ಪರಂಪರೆ**

ಆದಾಗ್ಯೂ, ಕಾಂಗ್ರೆಸ್‌ನ ವಂಶಪಾರಂಪರ್ಯದ ಆಡಳಿತ ಇರದಿದ್ದರೆ, ನೆಹರು ವಿರುದ್ಧ ವ್ಯಕ್ತವಾಗುವ ವೈಷಮ್ಯವು ಸಂಪೂರ್ಣವಾಗಿಯಲ್ಲದೇ ಹೋದರೂ ಕೊಂಚವಾದರೂ ಮಾಯವಾಗಿರಬಹುದಿತ್ತೆಂದು ಕಾಣುತ್ತದೆ. ದಾಸ್ ಗುಪ್ತ ಅವರು ಇದಕ್ಕೆ ಸಮ್ಮತಿಸುತ್ತಾರೆ: "ಒಬ್ಬ ವ್ಯಕ್ತಿಯಾಗಿ ಇರುವ ನೆಹರು ಒಂದು ಕಡೆಯಾದರೆ, ನೆಹರು ಅವರ ಪರಂಪರೆಯೇ ಇನ್ನೊಂದು ಕಡೆ. ಬಹಳಷ್ಟು ಟೀಕೆಗಳು ಒಬ್ಬ ವ್ಯಕ್ತಿಯಾಗಿ ನೆಹರು ಅವರ ವಿರುದ್ಧ ಇರುವುದಲ್ಲ; ನೆಹರೂವಾದದ ಪರಂಪರೆ ಹೇಗೆ ಮುಂದುವರಿದಿದೆ ಎಂಬುದರ ವಿರುದ್ಧವಾಗಿವೆ."

"ಕಳೆದ 40-50 ವರ್ಷಗಳಲ್ಲಿ, ಸಾರ್ವಜನಿಕ ವಲಯದ ಮೇಲೆ ನೆಹರು ಕುಟುಂಬವು ಏಕಾಧಿಪತ್ಯ ಸಾಧಿಸುತ್ತಿದೆ. ಈ ಏಕಾಧಿಪತ್ಯ ದೇಶದ ಹಿತಕ್ಕೆ ಸಂಬಂಧಿಸಿದ್ದಾಗಿಲ್ಲ" ಎಂಬ ಅಂಶದತ್ತ ರಾವ್ ಗಮನಸೆಳೆಯುತ್ತಾರೆ.

ಗುಹಾ ಅವರ ಪ್ರಕಾರ, ಇಂದಿರಾ ಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಸಂಘದ ಅನೇಕ ನಾಯಕರನ್ನು ಕಾರಾಗೃಹಕ್ಕೆ ತಳ್ಳಲಾಯಿತು, ಇದು ನೆಹರು ಅವರ ಪರಂಪರೆಗೆ ಬಹಳ ಹಾನಿಯನ್ನುಂಟುಮಾಡಿತು. "ಪ್ರಜಾಪ್ರಭುತ್ವದೊಡನೆ ನೆಹರೂವಾದಕ್ಕೆ ಇದ್ದ ಬದ್ಧತೆಯನ್ನು ತುರ್ತು ಪರಿಸ್ಥಿತಿ ದುರ್ಬಲಗೊಳಿಸಿತು," ಎಂದು ರಮೇಶ್ ಸಹ ಒಪ್ಪುತ್ತಾರೆ. "ಅದು ಆರ್.ಎಸ್.ಎಸ್.ಗೆ ಗೌರವಾರ್ಹತೆಯನ್ನು ನೀಡಿ ಅದನ್ನು ರಾಜಕೀಯ ಮುಖ್ಯವಾಹಿನಿಗೆ ತಂದಿತು."

"ಹಳೆಯ ಕಾಲದಲ್ಲೇ ಉಳಿದುಹೋದ" ಕಾರಣಕ್ಕಾಗಿ ನೆಹರೂವಾದಿಗಳನ್ನೂ ಟೀಕಿಸುತ್ತಾ, ನೆಹರು ಅನೇಕರು ಭಾವಿಸುವಷ್ಟು ಕಟ್ಟುನಿಟ್ಟಿನವರಾಗಿರಲಿಲ್ಲ ಎಂದು ರಮೇಶ್ ವಾದಿಸುತ್ತಾರೆ. "ಕಳೆದ 25 ವರ್ಷಗಳಲ್ಲಿ ನಾವು ಎದುರಿಸಿದಂತಹ ಸವಾಲುಗಳನ್ನು ನೆಹರು ಅವರು ಎದುರಿಸಿದ್ದರೆ, ಅವರ ಕಾರ್ಯಸಾಧನಗಳು ಬೇರೆ ರೀತಿಯದ್ದಾಗಿರುತ್ತಿತ್ತೇನೋ. ಸಾರ್ವಜನಿಕ ಕ್ಷೇತ್ರದ ಮೇಲೆ ಅವರು ಅದೇ ಮಟ್ಟದ ಬದ್ಧತೆಯನ್ನು ಹೊಂದಿರುತ್ತಿರಲಿಲ್ಲವೇನೋ." ಎನ್ನುತ್ತಾರೆ. "1950ರ ದಶಕದ ನೆಹರು ಅವರು ದೊಡ್ಡ ಅಣೆಕಟ್ಟುಗಳಲ್ಲಿ ಬಹಳ ನಂಬಿಕೆ ಇಟ್ಟಿದ್ದರು. ಆದರೆ 1960ರ ನೆಹರು ಅವರು ದೊಡ್ಡ ಅಣೆಕಟ್ಟುಗಳ ಬಗ್ಗೆ ಸ್ವಲ್ಪ ಸಂಶಯಪಡುವುದನ್ನು ಪ್ರಾರಂಭಿಸಿದ್ದರು. 1950ರ ನೆಹರು ಅವರು ಪಂಚಾಯಿತಿಗಳ ಬಗ್ಗೆ ಸಂಶಯ ಹೊಂದಿದ್ದರೆ, 1960ರ ವೇಳೆಗೆ ಅವರು ಅವುಗಳತ್ತ ಹೆಚ್ಚು ಆಕರ್ಷಿತರಾಗಿದ್ದರು" ಎಂಬ ಅಂಶಗಳನ್ನು ಕುರಿತು ಅವರು ಗಮನಸೆಳೆಯುತ್ತಾರೆ.

ಚಂದ್ರ ಅವರ ಪ್ರಕಾರ, ನೆಹರು ಅವರ ಉತ್ತರಾಧಿಕಾರಿಗಳು ಕಟ್ಟಿ ಬೆಳೆಸಿದ ವ್ಯಕ್ತಿಪೂಜೆಗೆ ಬಲಿಯಾದರು, ಆದರೆ "ನಮ್ಮ ಎಡಪಂಥೀಯ ವಿದ್ವಾಂಸರು ಮಾಡಿದ ಹಾನಿಯೇನೂ ಕಡಿಮೆ ಅಲ್ಲ" ಎಂದೂ ಅವರು ಸೇರಿಸುತ್ತಾರೆ. "ನಮ್ಮ ಹಲವಾರು ಎಡಪಂಥೀಯ ಇತಿಹಾಸಕಾರರು ಕಾಂಗ್ರೆಸ್ ಪಕ್ಷದ ಇತಿಹಾಸಕಾರರಾಗಿಬಿಟ್ಟರು. ಈ ಇತಿಹಾಸದ

ಲೇಖಕರು ಬಹಳ ದೊಡ್ಡ ಅನ್ಯಾಯ ಮಾಡಿದ್ದಾರೆ. ಅವರು ನೆಹರು ಅವರ ಮೇಲೆ ಮಾತ್ರವೇ ಹೆಚ್ಚು ಗಮನಹರಿಸಿದರು, ಪಟೇಲ್ ಅವರನ್ನು ಸಹ ಗಣನೆಗೆ ತೆಗೆದುಕೊಳ್ಳಲಿಲ್ಲ," ಎಂದು ಹೇಳುತ್ತಾ, ಈ ರೀತಿಯ ಏಕಪಕ್ಷೀಯ ಕಥನವು ಅವರ ವಿರೋಧಿಗಳಿಗೆ ಟೀಕಿಸಲು ಒಳ್ಳೆ ಅವಕಾಶ ಮಾಡಿಕೊಟ್ಟಿತು ಎಂಬುದನ್ನೂ ತಿಳಿಸುತ್ತಾರೆ.
ಗುಹಾ ಕೂಡ ಈ "ದುರದೃಷ್ಟಕರವಾದ ಮರೆಸುವಿಕೆಯ" ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. "ನೆಹರು ಅವರನ್ನು ಆರಾಧಿಸುವ ಒಂದು ಪಂಥವೇ ನಿರ್ಮಾಣವಾಗಿತ್ತು (ಮತ್ತು) ಅವರ ತಪ್ಪುಗಳನ್ನು ಗುರುತಿಸುವಂತೆಯೇ ಇರಲಿಲ್ಲ. ನೆಹರು ಅವರ ಬಗ್ಗೆ ನ್ಯಾಯವಾದ ಮೌಲ್ಯಮಾಪನ ಮಾಡುವ ಸಮಯವೊಂದು ಬರುತ್ತದ. ಅವರು ದೋಷಗಳಿದ್ದ, ಗಂಭೀರ ತಪ್ಪುಗಳನ್ನೆಸಗಿದ ನಾಯಕರಾಗಿದ್ದರು," ಎಂದು ಹೇಳುತ್ತಾರೆ.

ಆದರೂ, ನೆಹರು ಅವರ ಪರಂಪರೆಯ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವೆಂದು ಕಾಣುತ್ತದೆ. ಇತ್ತೀಚೆಗೆ ವಿದೇಶಾಂಗ ಸಚಿವೆಯಾದ ಸುಷ್ಮಾ ಸ್ವರಾಜ್ ಅವರು ಪಾಕಿಸ್ತಾನವನ್ನು ಕೆಣಕಲೆಂದು ಐ.ಐ.ಟಿ. ಮತ್ತು ಐ.ಐ.ಎಂ.ನ ಬಗ್ಗೆ ಕೊಚ್ಚಿಕೊಂಡಾಗ, ಮೊದಲ ಪ್ರಧಾನಮಂತ್ರಿಯ ದೃಷ್ಟಿಕೋನವನ್ನೇ ದೃಢಪಡಿಸಿದರು. ದಾಸ್ ಗುಪ್ತ ಅವರು "ಸರ್ಕಾರ ನಿಂತಿರುವ ಸಂಸ್ಥೆಗಳ ನಿರ್ಮಾಣದಲ್ಲಿ ನೆಹರು ಅವರ "ಬಹಳ ದೊಡ್ಡ ಪಾತ್ರ"ವನ್ನು ಒಪ್ಪಿಕೊಂಡರೆ, ಬಿ.ಜೆ.ಪಿ.ಯ ರಾವ್ ಅವರು "ಸಂಸತ್ತೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ" ಕಾರಣಕ್ಕೆ ನೆಹರು ಅವರನ್ನು ಮೆಚ್ಚುತ್ತಾರೆ.

ಹಿಂದಿನ ಪೀಳಿಗೆಯ ಹಲವು ಬಿ.ಜೆ.ಪಿ.- ಸಂಘದ ನಾಯಕರು ನೆಹರು ಅವರನ್ನು ಬಹಿರಂಗವಾಗಿ ಮೆಚ್ಚುತ್ತಿದ್ದರು. ವಾಜಪೇಯಿಯವರು ಜನತಾ ಸರ್ಕಾರದ ಅವಧಿಯಲ್ಲಿ ವಿದೇಶಾಂಗ ಸಚಿವರಾಗಿ ಹೊಸದಾಗಿ ನೇಮಕಗೊಂಡಿದ್ದ ದಿನಗಳಲ್ಲಿ ನಡೆದ ಪ್ರಸಿದ್ಧವಾದ ಒಂದು ಘಟನೆ ಇದೆ. ವಾಜಪೇಯಿ ಅವರು ಮೊದಲ ಬಾರಿ ಸೌತ್ ಬ್ಲಾಕ್‌ನಲ್ಲಿರುವ ತಮ್ಮ ಕಚೇರಿಯನ್ನು ಪ್ರವೇಶಿಸಿದಾಗ, ಪ್ರಾಯಶಃ ಯಾರೋ ಅತ್ಯುತ್ಸಾಹಿ ಅಧಿಕಾರಿಯೊಬ್ಬರು ಇರಬೇಕು, ನೆಹರು ಅವರ ಚಿತ್ರವನ್ನು ತೆಗೆದುಹಾಕಿಬಿಟ್ಟಿರುವುದನ್ನು ಗಮನಿಸಿದರು. "ಯಹಾ ಪಂಡಿತ್‌ಜಿ ಕಾ ಫೋಟೋ ಹುವಾ ಕರ್ತಾ ಥಾ (ಇಲ್ಲಿ ನೆಹರು ಅವರ ಭಾವಚಿತ್ರ ಇರುತ್ತಿತ್ತು)," ಎಂದು ವಾಜಪೇಯಿ ಸಿಬ್ಬಂದಿಯನ್ನು ಕೇಳಿದರೆಂದೂ, ಅದನ್ನು ತಕ್ಷಣವೇ ಮತ್ತೆ ಅಲ್ಲೇ ತೂಗುಹಾಕಿಸಲು ಆದೇಶಿಸಿದರೆಂದೂ ಹೇಳಲಾಗುತ್ತದೆ.

"ವಾಜಪೇಯಿ ಅವರು ಪದೇ ಪದೇ ತಾನು ನೆಹರು ಅವರಿಂದ ಆಳವಾಗಿ ಪ್ರಭಾವಿತನಾಗಿದ್ದೇನೆ ಎಂದು ಹೇಳುತ್ತಿದ್ದರು. ನೆಹರು ಅವರ ಗೌರವವನ್ನು ಕುಗ್ಗಿಸಲು ಪ್ರಯತ್ನಿಸುತ್ತಿರುವುದು ನಿಜವಾಗಿ ಮೋದಿ ಸರ್ಕಾರ" ಎಂದು ಮಣಿ ಶಂಕರ್ ಅಯ್ಯರ್ ಹೇಳುತ್ತಾರೆ. ಹಿರಿಯ ಬಿ.ಜೆ.ಪಿ. ನಾಯಕರಾದ ಎಲ್. ಕೆ. ಅಡ್ವಾಣಿ ಮತ್ತು ಭೈರೋನ್ ಸಿಂಗ್ ಶೇಖಾವತ್ ಅವರು ನೆಹರು ಅವರನ್ನು ಮೆಚ್ಚುಗೆಯಿಂದ ನೆನಪಿಸಿಕೊಂಡ ಘಟನೆಗಳನ್ನೂ ಕಾಂಗ್ರೆಸ್ ನಾಯಕರು ಹೇಳುತ್ತಾರೆ. "ಮೋದಿ ಆ ಪೀಳಿಗೆಗೆ ಸೇರಿದವರಲ್ಲ," ಎಂದು ರಮೇಶ್ ಹೇಳುತ್ತಾರೆ.

ಆದರೂ, ನೆಹರು ಅವರ ವಿರುದ್ಧದ ಟೀಕೆಗಳು ಕೆಲವೊಮ್ಮೆ ತಬ್ಬಿಬ್ಬಾಗಿಸುತ್ತವೆ.

ನೆಹರುವಾದಿ ಒಮ್ಮತವು (Nehruvian Consensus) ಆಧರಿತವಾಗಿದ್ದ ಮೂರು ತತ್ವಗಳೆಂದರೆ, ಸಾರ್ವಜನಿಕ ಕ್ಷೇತ್ರದ ಪ್ರಾಮುಖ್ಯತೆ, ಅಲಿಪ್ತ ನೀತಿ (Non-alignment) ಮತ್ತು ಜಾತ್ಯತೀತತೆ. ಈ ಮೂರರಲ್ಲಿ ಮೊದಲ ಎರಡು ತತ್ವಗಳಿಂದ

1990ರ ದಶಕದ ನಂತರ ಕಾಂಗ್ರೆಸ್ ಸರ್ಕಾರಗಳೇ ಕ್ರಮೇಣ ಕೊಂಡಿ ಕಳಚಿಕೊಂಡಿವೆ. ಸೈದ್ಧಾಂತಿಕವಾಗಿ, ಈಗ ಪ್ರಶ್ನೆಗೆ ಒಳಪಟ್ಟಿರುವ ಏಕೈಕ ಸ್ತಂಭವೆಂದರೆ ಜಾತ್ಯತೀತತೆ.

ನೆಹರುವಾದಿ ಜಾತ್ಯತೀತತೆಯ ಕುರಿತು ಮಾತನಾಡುತ್ತಾ, ದಾಸಗುಪ್ತ ಅವರು ನೆಹರು ಅವರಿಗೆ ಸ್ವಲ್ಪ ಅನುಮಾನದ ಲಾಭ (benefit of doubt) ನೀಡುತ್ತಾರೆ. "ಪ್ರತಿ ವಿಚಾರಕ್ಕೂ ಒಂದು ಸಮಯವಿರುತ್ತದೆ. ಬಹುಶಃ ಆ ಕಾಲಘಟ್ಟದಲ್ಲಿ, ವಿಭಜನೆಯಿಂದ ದೇಶ ಚೇತರಿಸಿಕೊಳ್ಳುತ್ತಿದ್ದುದರಿಂದ, ಸ್ವಲ್ಪ ಹೆಚ್ಚು ಸೂಕ್ಷ್ಮವಾದ ವಿವೇಚನೆಯಿಂದ ನಡೆದುಕೊಳ್ಳಬೇಕಾಗಿತ್ತು," ಎಂದು ಅವರು ಹೇಳುತ್ತಾರೆ. "ಭಾರತಕ್ಕೆ ಬರುವ ಮುಸ್ಲಿಮರಿಗೆ ವಿಶೇಷವಾಗಿ ತಮಗೆ ಇಲ್ಲಿ ಸ್ವಾಗತವಿದೆ ಎಂಬ ಭಾವನೆ ಬರುವಂತೆ ನಾವು ಮಾಡಬೇಕು ಎಂದು ನೆಹರು ಹೇಳಿದಾಗ, ಬಹುಶಃ ಆ ಮಾತಿನಲ್ಲಿ ಸತ್ಯವಿತ್ತು. ಆಗ ಅದು ಸರಿ ಇದ್ದಿರಬಹುದು. ಆದರೆ ಈಗ ಖಂಡಿತವಾಗಿಯೂ ಅಲ್ಲ," ಎಂದು ಅವರು ಸೇರಿಸುತ್ತಾರೆ.

ಆದರೆ ಇಂತಹ ಸೂಕ್ಷ್ಮ ಸಂವೇದನೆಯುಳ್ಳ ಮೌಲ್ಯಮಾಪನಕ್ಕೆ ಹೆಚ್ಚು ಅವಕಾಶ ಇರುವಂತೆ ಕಾಣುವುದಿಲ್ಲ, ಏಕೆಂದರೆ ಸಂಘದ ಕೆಲವು ವಿರೋಧಗಳು ಬೌದ್ಧಿಕವಾಗಿರುವುದಕ್ಕಿಂತ ಹೆಚ್ಚು "ಭಾವನಾತ್ಮಕ"ವಾಗಿವೆ ಎಂದು ತೋರುತ್ತದೆ. "ನಾವು ನೆಹರು ಅವರನ್ನು ಓದುತ್ತಿಲ್ಲ" ಎಂಬುದನ್ನು ಒಪ್ಪಿಕೊಳ್ಳುವ ಸ್ವರೂಪ್, "ಸಂಘವು ಒಂದು ಬೌದ್ಧಿಕ ಚಳವಳಿಯಲ್ಲ... ಸಂಘವು ರಾಷ್ಟ್ರೀಯತೆಯನ್ನು, ಅದರ ಭಾವನೆಗಳನ್ನು ಪ್ರತಿನಿಧಿಸುತ್ತದೆ" ಎಂದು ಸಮರ್ಥಿಸಿಕೊಳ್ಳುತ್ತಾರೆ. ಗುಹಾ ಅವರು, "ಎಲ್ಲಿಯವರೆಗೂ ನೆಹರು-ಗಾಂಧಿ ಕುಟುಂಬದ ಕೊನೆಯ ಸದಸ್ಯರು ರಾಜಕೀಯದಿಂದ ನಿವೃತ್ತಿಯಾಗುವುದಿಲ್ಲವೋ, ಅಲ್ಲಿಯವರೆಗೆ ನೆಹರು ಅವರ ಬಗ್ಗೆ ನಿಷ್ಪಕ್ಷಪಾತದ ಮೌಲ್ಯೀಕರಣ ಸಾಧ್ಯವಾಗುವುದಿಲ್ಲ" ಎಂಬುದು ನನ್ನ ಅನಿಸಿಕೆ ಎಂದು ಹೇಳುತ್ತಾರೆ.

ಅಲ್ಲಿಯವರೆಗೆ, ನೆಹರು ಅವರು ಕಾಯಲೇಬೇಕು.